ಆಫ್ ರೂಪಿ) ಎಂಬ ಶೀರ್ಷಿಕೆಯಡಿ ಪುಸ್ತಕ ರೂಪದಲ್ಲಿಯೂ ಪ್ರಕಟಣೆ ಆಗುತ್ತದೆ.

ಅಂಬೇಡ್ಕರ್ ಅರ್ಥಶಾಸ್ತ್ರದ ಚಿಂತನೆ, ಭಾರತದ ಹಣಕಾಸು ವ್ಯವಸ್ಥೆಯ ಸಮಸ್ಯೆ ಕುರಿತ ಈ ಸಂಶೋಧನಾ ಕೃತಿ ಸರ್ಕಾರದ ಗಮನಕ್ಕೆ ಬರುತ್ತದೆ. 'ರೂಪಾಯಿಯ ಸಮಸ್ಯೆ ಮತ್ತು ಪರಿಹಾರ' ಪರಿಹರಿಸಲು ಬ್ರಿಟಿಷ್ ಸರ್ಕಾರ 1926ರಲ್ಲಿ ಹಿಲ್ಟನ್ ಯಂಗ್ ಅಧ್ಯಕ್ಷತೆಯಲ್ಲಿ ಹತ್ತು ಜನರ ಸದಸ್ಯರನ್ನು ಒಳಗೊಂಡ ಒಂದು ಆಯೋಗವನ್ನು ಸ್ಥಾಪಿಸುತ್ತದೆ. ಆ ಆಯೋಗ ಅಧ್ಯಯನ ಸಂಬಂಧ ಭಾರತವನ್ನು ಸುತ್ತಾಡಿ ಸಮೀಕ್ಷೆ ನಡೆಸುತ್ತದೆ. ಆಯೋಗದ ಮುಂದೆ ಅಂಬೇಡ್ಕರ್ ಕೂಡ ಹಾಜರಾಗಿ, ಸುಧಾರಣೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯವನ್ನು ದಾಖಲಿಸುತ್ತಾರೆ.

ಕರೆನ್ಸಿ (ರೂಪಾಯಿ) ನಿಯಂತ್ರಿಸುವ ಅಧಿಕಾರವನ್ನು ಸರ್ಕಾರಕ್ಕೆ ನೀಡಬಾರದು. ಕರೆನ್ಸಿ ಪೂರೈಕೆಯನ್ನು ಅಗತ್ಯಕ್ಕೆ ತಕ್ಕಂತೆ ಹೆಚ್ಚಿಸಬೇಕು ಅಥವಾ ಕಡಿಮೆ ಮಾಡಬೇಕು. ಸರ್ಕಾರ ತನ್ನ ಅಗತ್ಯಕ್ಕೆ ತಕ್ಕಂತೆ ಅನಿಯಂತ್ರಿತವಾಗಿ ಉತ್ಪಾದಿಸಬಹುದು. ಅದರಿಂದ ಕರೆನ್ಸಿ ವ್ಯವಸ್ಥೆಯೇ ನಾಶವಾಗುವ ಸಾಧ್ಯತೆಯಿದೆ. ಇಂತಹ ಅನೇಕ ಉದಾಹರಣೆಗಳು ಇತಿಹಾಸದಲ್ಲಿ ದಾಖಲಾಗಿವೆ. ಅದಕ್ಕಾಗಿ ಕೇಂದ್ರೀಯ ಬ್ಯಾಂಕ್ ಒಂದನ್ನು ಸ್ಥಾಪಿಸಬೇಕು ಎಂದು ಅಂಬೇಡ್ಕರ್ ಪ್ರತಿಪಾದಿಸುತ್ತಾರೆ. ಅವರ ಅಭಿಪ್ರಾಯವನ್ನು ದಾಖಲಿಸಿಕೊಂಡ ಹಿಲ್ಟನ್ ಯಂಗ್ ನೇತೃತ್ವದ ಆಯೋಗ 1934ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ನೀಡುತ್ತದೆ. ಮರುವರ್ಷವೇ ಭಾರತದಲ್ಲಿ ರಿಸರ್ವ್ ಬ್ಯಾಂಕ್ ತಲೆಯೆತ್ತಿತು.

## ಜಮೀನಿನ ರಾಷ್ಟ್ರೀಕರಣ

ಸಂಕಷ್ಟದಲ್ಲಿಯೇ ಸುಧಾರಣಾ ಚಿಂತನೆಗಳು ಕಣ್ಣು ತೆರೆಯುತ್ತವೆ ಎನ್ನುವುದಕ್ಕೆ ಮತ್ತೆ ಮುನ್ನೆಲೆಗೆ ಬಂದ ರಾಷ್ಟ್ರೀಕರಣದ ವಿಚಾರಗಳೇ ಸಾಕ್ಷಿಯಾಗುತ್ತವೆ. ಆರೋಗ್ಯ ಮತ್ತು ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಬೇಕೆಂಬ ಒತ್ತಾಸೆ ಮತ್ತೀಗ ಚರ್ಚೆಗೆ ಗ್ರಾಸವಾಗಿವೆ. ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಆಸ್ಪತ್ರೆಗಳ ರಾಷ್ಟ್ರೀಕರಣ ಕೂಡ ಒಂದು ಮದ್ದು; ಅದು ವೈದ್ಯಕೀಯ ವ್ಯವಸ್ಥೆ ಸುಧಾರಿಸಲು ಇರುವ ಒಂದು ಚಿಕಿತ್ಸೆ. ಅಂತೆಯೇ ಶಿಕ್ಷಣವೂ ರಾಷ್ಟ್ರೀಕರಣ ಆಗಲಿ ಎನ್ನುವ ವಿಚಾರಗಳು ಮೇಲಿಂದ ಮೇಲೆ ಕೇಳಿ ಬರುತ್ತಲೇ ಇವೆ.

ಅಂಬೇಡ್ಕರ್ ಅವರು 'ಭೂಮಿಯನ್ನು ರಾಷ್ಟ್ರೀಕರಣ ಮಾಡಬೇಕು' ಎಂದು ಪ್ರತಿಪಾದಿಸುತ್ತಾರೆ. ಸಹಕಾರಿ ತತ್ವದ ಅಡಿ ಬೇಸಾಯವನ್ನು ಮಾಡುವ ಮೂಲಕ ಸಮುದಾಯವನ್ನು ಒಳಗೊಳ್ಳುವುದರಿಂದ ಕೃಷಿ ಆರ್ಥಿಕತೆಯನ್ನು ಸುಸ್ಥಿರಗೊಳಿಸಬಹುದು ಎನ್ನುವುದು ಅವರ ಅಭಿಪ್ರಾಯ. ಅಂದರೆ, ಜಮೀನು ಸರ್ಕಾರದ್ದು, ಸಹಕಾರ ನಿಯಮಾನುಸಾರ ಅದರ ಉಳುಮೆ ಮಾಡಿ ಅದರ ಪ್ರತಿಫಲವನ್ನು ಅನುಭವಿಸಬೇಕು ಎನ್ನುವುದು ಅವರ ನಂಬಿಕೆ. ಇದೇನಾದರೂ ಜಾರಿಗೊಂಡಿದ್ದರೆ ಇಂದು ರೈತರು ಬೆವರು ಸುರಿಸಿ ತೆಗೆದ ಫಸಲನ್ನು ಗೊಬ್ಬರವನ್ನಾಗಿ ಮಾಡಿ ಗೋಗರೆಯುತ್ತಿರಲಿಲ್ಲ ಎನಿಸುತ್ತದೆ. ಈಗ ಕೆಎಂಎಫ್, ಅಮೂಲ್‌ನಂತಹ ಹಾಲು ಉತ್ಪಾದಕ ಸಹಕಾರ ಸಂಸ್ಥೆಗಳು ಸಾಧಿಸಿದ ಆರ್ಥಿಕ ಪ್ರಗತಿ ನೋಡಿದರೆ ಭೂಮಿಯ ರಾಷ್ಟ್ರೀಕರಣದ ಮಹತ್ವ ಅರ್ಥವಾಗುತ್ತದೆ.

## ಶೋಷಣೆ ಮುಕ್ತ ಆರ್ಥಿಕತೆ

'ಸ್ಟೇಟ್ಸ್ ಅಂಡ್ ಮೈನಾರಿಟೀಸ್' ಪುಸ್ತಕದಲ್ಲಿ ಆರ್ಥಿಕ ಶೋಷಣೆಗೆ ಸಂಬಂಧಿಸಿದಂತೆ ಅಂಬೇಡ್ಕರ್ ವಿವರವಾಗಿ ಚರ್ಚಿಸಿದ್ದಾರೆ. ಬೃಹತ್ ಕೈಗಾರಿಕೆಗಳು ಮತ್ತು ಅತ್ಯವಶ್ಯ ಉತ್ಪನ್ನಗಳ ಕಾರ್ಖಾನೆಗಳು ಸರ್ಕಾರದ ಸ್ವಾಮ್ಯದಲ್ಲೇ ನಡೆಯಬೇಕು. ಅಷ್ಟು ಅಗತ್ಯ ಅನ್ನಿಸದ ದೊಡ್ಡ ಕೈಗಾರಿಕೆಗಳು ಸರ್ಕಾರಿ ಸ್ವಾಮ್ಯದ ಮಂಡಳಿ–ನಿಗಮದ ವ್ಯಾಪ್ತಿಯಲ್ಲಿ ಇರಬೇಕು. ಸಣ್ಣ ಕೈಗಾರಿಕೆ, ಕುಶಲ ಮತ್ತು ಗುಡಿ ಕೈಗಾರಿಕೆಗಳನ್ನು ಮಾತ್ರ ಖಾಸಗಿ ಕ್ಷೇತ್ರಕ್ಕೆ ಬಿಟ್ಟುಕೊಡಬೇಕು ಎನ್ನುವುದು ಅವರ ನಿಲುವು.

ಜೀವ ವಿಮೆ ರಾಜ್ಯದ ಏಕಸ್ವಾಮ್ಯದಲ್ಲಿ ಇರಬೇಕು. ಪ್ರತಿಯೊಬ್ಬ ನಾಗರಿಕನ ಆದಾಯಕ್ಕೆ ಅನುಗುಣವಾಗಿ ಜೀವ ವಿಮೆ ಪಾಲಿಸಿಯನ್ನು ಸರ್ಕಾರವೇ ನಿರ್ಧರಿಸುವ ಯೋಜನೆಯನ್ನು ರೂಪಿಸಬೇಕು. ಕೃಷಿ ಕೂಡ ರಾಜ್ಯದ ಕೈಗಾರಿಕೆಯ ಭಾಗ ಎಂದು ಪರಿಗಣಿಸಬೇಕು. ಖಾಸಗಿ ಸ್ವಾಮ್ಯದಲ್ಲಿ ಇರುವ ಭೂಮಿಯನ್ನು ಸರ್ಕಾರ ಸೂಕ್ತ ಪರಿಹಾರ ನೀಡಿ ತನ್ನ ವಶಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರಬೇಕು. ಭೂ ಸುಧಾರಣೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಬೇಕು ಎನ್ನುವುದು ಅಂಬೇಡ್ಕರ್ ವಾದವಾಗಿತ್ತು.

ವೈಯಕ್ತಿಕ ಆದಾಯ ತೆರಿಗೆಯಲ್ಲೂ ಸುಧಾರಣೆ ಅಗತ್ಯ. ಒಬ್ಬ ವ್ಯಕ್ತಿಯ ತೆರಿಗೆಯನ್ನು ಆತ ಪಾವತಿಸುವ ಸಾಮರ್ಥ್ಯದ ಮೇಲೆ ನಿರ್ಧರಿಸಬೇಕೆ ಹೊರತು ಆದಾಯದ ಮೇಲಲ್ಲ. ತೆರಿಗೆ ನೀತಿ ಪ್ರಗತಿಪರವಾಗಿರಬೇಕು. ಆರ್ಥಿಕ ಸ್ಥಿತಿಗತಿಗಳು ಕೂಡ ಆದಾಯ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ■

## ಅಂಬೇಡ್ಕರ್ ವ್ಯಾಖ್ಯಾನಗಳು

- ಸಮಾನತೆ ಒಂದು ಕಲ್ಪನೆ ಇರಬಹುದು, ಆದರೆ ಅದನ್ನು ಸರ್ಕಾರ ತನ್ನ ತತ್ವ ಎಂದು ಸ್ವೀಕರಿಸಲೇಬೇಕು.
- ಅರ್ಥ ವ್ಯವಸ್ಥೆಯಲ್ಲಿ ಖಾಸಗಿ ಕ್ಷೇತ್ರ ಮತ್ತು ವಾಣಿಜ್ಯೋದ್ಯಮಗಳ ಪಾತ್ರವಿರುತ್ತದೆ. ಆದರೆ ಅದು ದಮನಕಾರಿಯಾಗಬಾರದು.
- ಭದ್ರತೆಯ ಖಾತರಿ ನೀಡದ ಆರ್ಥಿಕ ಯೋಜನೆಯಿಂದ ಯಾವ ಉಪಯೋಗವೂ ಇಲ್ಲ. ಯೋಜನೆ ಒಪ್ಪಿತವಾಗಬೇಕಾದರೆ ಅದು ಮಿತವ್ಯಯದ್ದೂ ಮತ್ತು ಸುಭದ್ರವೂ ಆಗಿರಬೇಕು.

